ಈ) ಬಡ್ಡಿ ಸಂಬಂಧದ ಸಹಾಯಧನ ಪಾವತಿಯಾಗದೆ, ಸಂಘಗಳಿಗೆ ಆದ ನಷ್ಟಕ್ಕೆ ಹೊಣೆ ಯಾರು? ಎಷ್ಟು ದಿನಗಳಲ್ಲಿ ಈ ಸಹಾಯಧನ ಪಾವತಿಸಲು ವಿವರಿಸಿ ಮಾಡಲಾಗುವುದು ?

ಉ) ನಬಾರ್ಡ್‌ನಿಂದ (ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ರೈತರಿಗೆ ಸಾಲ ವಿತರಣೆಯಾಗುವಾಗ ಮೂರು ಸಂಸ್ಥೆಗಳ ಮೂಲಕ ಹಣ ಹಾದು ಹೋಗಬೇಕಾಗಿದ್ದು, ರೈತರಿಗೆ ತಲುಪುವಾಗ ಬೀಳುತ್ತಿರುವ ಶೇ. ೭ರ ದರ ಬಡ್ಡಿಯನ್ನು ಒಂದೇ ಒಂದು ಸಂಸ್ಥೆಯನ್ನು ಕೈ ಬಿಡುವುದರಿಂದ ಇನ್ನೂ ಸುಮಾರು ಶೇ. ೨ರ ಬಡ್ಡಿಯನ್ನು ರೈತರಿಗೆ ಕಡಿಮೆ ಮಾಡಬಹುದಲ್ಲವೆ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ೧೯೮೨-೮೩, ೧೯೮೩-೮೪ ಮತ್ತು ೧೯೮೪-೮೫ನೇ ಸಾಲುಗಳಲ್ಲಿ ಮರುಪಾವತಿ.

ಆ) ಮಾಡಿದಂತ ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ ಹಣವನ್ನು ಸರ್ಕಾರವು ಈಗಾಗಲೇ ಪೂರ್ತಿಯಾಗಿ ಕೊಟ್ಟಿರುತ್ತದೆ. ೧೯೮೫-೮೬ನೇ ಸಾಲಿನಲ್ಲಿ ಸಂಬಂಧಪಟ್ಟ ಸಹಕಾರ ಸಂಘಗಳು ತಮ್ಮ ಬೇಡಿಕೆಗಳನ್ನು (ಕ್ಲೈಮ್ಸ್) ಇನ್ನೂ ಸಲ್ಲಿಸಿರುವುದಿಲ್ಲ.

ಇ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ೧೯೮೨-೮೩ನೇ ಸಾಲಿನ ತನ್ನ ಪಾಲನ್ನು ಈಗಾಗಲೇ ಕೊಟ್ಟಿರುತ್ತದೆ. ಉಳಿದ ವರ್ಷಗಳ ಬಗ್ಗೆ ರಿಯಾಯಿತಿಯ ಹೊಣೆಯನ್ನು ತಾವು ಭರಿಸುವಷ್ಟು ಆರ್ಥಿಕವಾಗಿ ಶಕ್ತವಾಗಿಲ್ಲವೆಂಬ ಕಾರಣದ ಮೇಲೆ ಅಪೆಕ್ಸ್ ಬ್ಯಾಂಕು ಹಾಗೂ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸರ್ಕಾರವೇ ರಿಯಾಯಿತಿಯ ಪೂರ್ಣ ಭಾರವನ್ನು ಭರಿಸಬೇಕೆಂದು ಕೇಳಿಕೊಂಡಿದೆ. ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) (ಅ) ಮತ್ತು (ಆ) ಗಳಿಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈಗ ಆರ್ಥಿಕ ಸಂಸ್ಥೆಗಳು ನಿಗದಿ ಪಡಿಸಿದ ದಿನಾಂಕದೊಳಗಾಗಿ ಮರುಪಾವತಿ ಆಗುವ ಚಾಲ್ತಿ ಸಾಲಗಳ ಮೇಲೆ ರೈತರಿಂದ ಶೇ. ೭ ರಂತೆ ಮಾತ್ರ ಬಡ್ಡಿಯನ್ನು ಸಹಕಾರಿ ಸಂಘಗಳು ವಸೂಲಿ ಮಾಡುತ್ತಿವೆ. ಇದು ನಬಾರ್ಡ್‌ನವರು ಅಪೆಕ್ಸ್ ಬ್ಯಾಂಕಿಗೆ ಸಾಲ ಕೊಡುವಾಗ ವಿಧಿಸುವ ಬಡ್ಡಿ ದರಕ್ಕೆ ಸಮನಾಗಿದೆ. ನಬಾರ್ಡ್ ಸಂಸ್ಥೆ ನೀಡುವ ಸಾಲವಲ್ಲದೆ ಅಪೆಕ್ಸ್ ಬ್ಯಾಂಕ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ತಮ್ಮ ಸ್ವಂತ ಸಂಪನ್ಮೂಲಗಳಿಂದಲೂ ಸಹ ಸಾಲ ವಿತರಿಸುತ್ತಿವೆ. ಆದಕಾರಣ ಹಾಲಿ ಇರುವ ವ್ಯವಸ್ಥೆಯಲ್ಲಿ ಯಾವೊಂದು ಸಂಸ್ಥೆಯನ್ನು ಕೈ ಬಿಡುವ ಸಲಹೆ ಸಮಂಜಸವಲ್ಲ.

## ರಾಜ್ಯದ ಸಹಕಾರ ಅಪೆಕ್ಸ್ ಬ್ಯಾಂಕಿನ ಪೆಚ್ಚಿದ ಬಗ್ಗೆ.

೬೫೦. ಶ್ರೀ ಐ. ಬಿ. ಶಂಕರ್ (ಚಿಕ್ಕಪಾಗಳೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಪ್ರಧಾನ ಕಛೇರಿಯು ಒಂದು ತಿಂಗಳ ದೂರವಾಣಿ ಪೆಚ್ಚವೆಷ್ಟು, ಯಾವ ತಿಂಗಳಲ್ಲಿ ಗರಿಷ್ಟ ಪೆಚ್ಚವಾಗಿದೆ ಮತ್ತು ಅದರ ಮೊತ್ತವೆಷ್ಟು ?

ಆ) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಕಳೆದ ಮಹಾ ಸಭೆಗೆ ಖರ್ಚಾಗಿರುವ ಹಣವೆಷ್ಟು ?

ಇ) ೧೯೮೫-೮೬ನೇ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕಿನಲ್ಲಿ ಅತಿಥಿ ಸತ್ಕಾರಕ್ಕೆ ಖರ್ಚಾಗಿದ್ದ ಹಣವೆಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಪ್ರಧಾನ ಕಛೇರಿಯ ಒಂದು ತಿಂಗಳ ಸರಾಸರಿ ದೂರವಾಣಿ ಪೆಚ್ಚ ಸುಮಾರು ೨೬,೦೦೦-೦೦ ರೂ.ಗಳು. ೧೯೮೫-೮೬ನೇ ಸಹಕಾರ ಸಾಲಿನಲ್ಲಿ ಮೇ ತಿಂಗಳಲ್ಲಿ ಗರಿಷ್ಟ ಪೆಚ್ಚವಾಗಿದ್ದು ಇವರ ಮೊತ್ತ ೪೪,೦೦೦-೦೦ ರೂ.ಗಳು ಆಗಿರುತ್ತದೆ. ಇದರಲ್ಲಿ ಪಿಟಿವಿಕ್ಸ್ ಬೋರ್ಡ್‌ನ ವಾರ್ಷಿಕ ಬಾಡಿಗೆಯಾದ ರೂ. ೨೦,೦೦೦ಗಳು ಸೇರಿರುತ್ತದೆ.

ಆ) ೧೯೮೪-೮೫ನೇ ಸಾಲಿನಲ್ಲಿ ರೂ. ೫,೯೪೪-೦೦.

ಇ) ೧,೩೮,೪೫೦-೪೫ ರೂ.ಗಳು.